ಇಡುವ ಪ್ರತಿ ಹೆಜ್ಜೆಯೂ ಸವಾಲೇ ಆಗಿರುವ ಹೆಣ್ಣಿನ ಬದುಕಿನ ಆ ಒಂದೊಂದು ಹೆಜ್ಜೆಯೂ ಒಂದು ಹೋರಾಟವೇ ಇವತ್ತು. ಹಂಗೇ ಅದು ಸಹಜವಾಗಿ ಇವತ್ತಿನ ಮಹಿಳಾ ಬರಹದಲ್ಲಿ ಅಭಿವ್ಯಕ್ತವಾಗ್ತಿದೆ. ಜತೆಗೆ, ಇನ್ನೊಂದು ಒಳ್ಳೆಯ ಬೆಳವಣಿಗೆ ಅಂದ್ರೆ, ತಮ್ಮ ಸುತ್ತುಲೂ ಕೊರಕೊಂಡಿದ್ದ ಗೆರೆಯನ್ನ ನಮ್ಮ ವರ್ತಮಾನದ ಲೇಖಕಿಯರು ಇವತ್ತು ಮೀರುವ ಪ್ರಯತ್ನ ಮಾಡ್ತಾ ಇರೋದು ಮತ್ತು ಅವರ ಬರವಣಿಗೆ ಹಿಂದಿಗಿಂತಲೂ ಹೆಚ್ಚು ಪ್ರಚಾರಕ್ಕೆ ಬರುತ್ತಿರುವುದು. ಬದಲಾಗ್ತಾ ಇರೋ ಸಮಯಕ್ಕೆ ತಕ್ಕಂತೇ ಮಹಿಳಾ ಸಾಹಿತ್ಯವೂ ವೈವಿಧ್ಯಮಯವಾಗ್ತಾ ಇದೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಹೆಜ್ಜೆಯಿಟ್ಟು ತಳವೂರುತ್ತಾ ಪ್ರಬಲವಾಗಿ ಮುಂದುವರಿಯುತ್ತಿದೆ. ಇದಕ್ಕೆ ಇನ್ನಷ್ಟು ಮನ್ನಣೆ ಸಿಕ್ಕು ಹೆಚ್ಚೆಚ್ಚು ವೇದಿಕೆಗಳು ಸಿಗ್ಬೇಕು. ಜತೆಗೆ ಮತ್ತಷ್ಟೂ ಪ್ರೋತ್ಸಾಹ, ಓದು, ಆ ಕುರಿತು ಚರ್ಚೆ ಸಂವಾದ, ಸಂಶೋಧನೆ ಸಹ.

◆ **ವೃತ್ತಿಯಿಂದ ವೈದ್ಯರಾಗಿದ್ದ, ಜನಪರ ಪ್ರವೃತ್ತಿಯಿಂದ ರಾಜಕಾರಣಿಯಾಗಿ ಹೊರ ಹೊಮ್ಮಿದ ಡಾ. ತಿಪ್ಪೇಸ್ವಾಮಿಯವರ ಮಗಳು ನೀವು. ಲಂಕೇಶರು ನಿಮ್ಮ ತಂದೆಯವರ ವೃತ್ತಿಬದುಕಿನ ಸಂಗತಿಯನ್ನು ಆಧರಿಸಿ 'ಮುಟ್ಟಿಸಿಕೊಂಡವನು' ಕಥೆ ಬರೆದಿದ್ದರು. ನಿಮ್ಮ ಮೇಲೆ ತಂದೆಯವರ ಬದುಕು ವ್ಯಕ್ತಿತ್ವದ ಪ್ರಭಾವದ ಬಗ್ಗೆ ಹೇಳಿ.**

ನನ್ನ ಬರವಣಿಗೆಯ ನೆಲೆ, ಸೆಲೆ, ಸ್ಫೂರ್ತಿ ನನ್ನ ಮನೆ. ಸಣ್ಣ ಛತ್ರದಂತೆ ಇದ್ದ ಮನೆ ತುಂಬಾ ಚಿಕ್ಕೊಡ್ಡಪ್ಪಂದಿರು, ಚಿಕ್ಕೊಡ್ಡಮ್ಮಂದಿರು. ಅತ್ತೆಮಾವಂದಿರು, ಹಳ್ಳಿಯಿಂದ ಓದಲು ಬಂದಿದ್ದವರು ಹತ್ತಾರು ಮಂದಿ, ಜತೆಗೆ ಕೆಲಸ ಮಾಡಿಕೊಂಡು ಮನೇಲೆ ಇದ್ದವರು ಹತ್ತಾರು ಮಂದಿ. ಅವರ ಸಂಗಾಟ, ಆಟ, ಬಾಲ್ಯದ ಹುಡುಗಾಟ; ಅಜ್ಜನ ತೊಡೆಯೇರಿ, ಅವನ ಕಂಬಳಿಯಲ್ಲಿ ಅವಿಸಿ ಕುಂತು ನಿದ್ದೆ ಮೆತ್ತಿದ ಕಣ್ರೆಪ್ಪೆಗಳನ್ನು ಅಂಟದಂತೆ ಬಲವಂತದಿಂದ ಅಗಲವಾಗಿ ತೆರೆದಿಟ್ಟು ರಾತ್ರಿಯಿಡೀ ನಿದ್ದೆಗೆಟ್ಟು ಕೇಳ್ತಿದ್ದ ಅದ್ಭುತ ರಮ್ಯ ಕತೆಗಳು, ನಿಂತ ನಿಲುವಲ್ಲೇ ಅವರು ಕಟ್ಟಿ ಹಾಡುತ್ತಿದ್ದ ಪದಗಳು, ಮುಸ್ಸಂಜೆ ದೀಪ ಹೊತ್ತಿದಾಕ್ಷಣ ಮನೆಯ ಮುಂದಿನ ಸಗಣಿ ಸಾರಿಸಿದ ದೊಡ್ಡ ಅಂಗಳದಲ್ಲಿ ಹುಡುಗರೆಲ್ಲ ಸೇರಿ ಹೊಯ್ಯುತ್ತಿದ್ದ ಕೋಲು ಜತೆಗೆ ಅಲ್ಲಿ ಬಟ್ಟಬಯಲಾಗುತ್ತಿದ್ದ ಎಲ್ಲಾ ಸರಸ, ವಿರಸ, ಹಾದರ, ಅನುಕಂಪ, ಜಗಳ, ಪಂಚಾಯ್ತಿ. ಯಾವುದು ಖಾಸಗಿಯಲ್ಲ. ವೈಯಕ್ತಿಕವಲ್ಲ. ಆ ತೆರೆದುಕೊಳ್ಳೋದ್ರಲ್ಲಿದ್ದ ಕೊಡುಕೊಳ್ಳುವಿಕೆನೇ ಒಂದು ಅಪರೂಪದ ಅನುಭವ. ಅಲ್ಲಿದ್ದವರು, ಬಂದವರು, ಬರುತ್ತಿದ್ದವರು ಎಲ್ಲರೂ ಕೂಲಿ ಮಾಡಿ ಬದುಕುತ್ತಿದ್ದವರು. ಅವರಿಗೆ ಉಣಲು ಉಡಲು ಕೊರತೆಯ ಹೊರತು ಅವರೊಳಗೆ ಸುಪ್ತವಾಗಿದ್ದು ಉಕ್ಕಿ ಹರಿಯುತ್ತಿದ್ದ ಜೀವನೋತ್ಸಾಹದ ಒರತೆಗಲ್ಲ. ಇವರೆಲ್ಲರನ್ನು, ಇದೆಲ್ಲವನ್ನ ಪೋಷಿಸುತ್ತಿದ್ದ ಅಪ್ಪಾಜಿಯನ್ನು ಬುದ್ಧಿ ತಿಳಿದಾಗಿನಿಂದಲೂ ಗಮನಿಸುತ್ತಲೇ ಬೆಳೆದವಳು ನಾನು. ಅಪ್ಪಾಜಿ ಒಂದು ಪವಾಡ! ಅದ್ಭುತ! ಎಲ್ಲಾ ವರ್ಗದ ಜನರೊಡನೆ ಬೆರೆಯುತ್ತಿದ್ದ ರೀತಿ, ಎಂತಹ ಕಷ್ಟದ ಬಿಕ್ಕಟ್ಟಿನ ಪರಿಸ್ಥಿತಿ ಇರಲಿ ಅದನ್ನ ತನ್ನ ನಗು ಮತ್ತು ಪ್ರೀತಿಯಿಂದಲೇ ಗೆಲ್ಲುತ್ತಿದ್ದ ಪರಿಯೇ ಸಾಕ್ಷಿ ಅದಕ್ಕೆ. ತನ್ನ ಬಡತನ ಮತ್ತು ಜಾತಿಯ ಕಾರಣದಿಂದ ಬರಿ ಅವಹೇಳನ, ನೋವು ಅನುಭವಿಸಿದರೂ ಜಗ್ಗದ ಆಸಾಮಿಗೆ ಅವು ಏನನ್ನೂ ಮಾಡಲು ಸಾಧ್ಯವಾಗಲಿಲ್ಲ. ಬದಲಿಗೆ ಆ ಎಲ್ಲಾ ಬೆಳವಣಿಗೆಗೆ, ಏರಿದ ಆ ಎತ್ತರಕ್ಕೆ ಅಪ್ಪಾಜಿಯ ಹಿನ್ನೆಲೆಯೇ ಮೂಲ. ಹಾಗೇನೆ ಮೇಲರಿಮೆ, ಕೀಳರಿಮೆ ಮುಂತಾದ ಕಾಂಪ್ಲೆಕ್ಸ್ ನಮ್ಮತ್ತ ಸುಳಿಯಲೂ ಬಿಡಲಿಲ್ಲ. ನಮ್ಮ ರಜಾ ದಿನಗಳೆಲ್ಲಾ ಹಿರೇಹಳ್ಳಿ, ಬ್ಯಾಲದ ಮರ, ಚಿತ್ರದುರ್ಗದ ಕೆಳಗೋಟೆಯ ನಮ್ಮಟ್ಟಿಗಳಲ್ಲೆ. ಕುಲದವರೊಡನೆ, ಬಂಧುಗಳೊಡನೆ ಬೆರೆತು ಬೆಳೆದ ನಮ್ಮನ್ನು ನಾವು ಬೇರೆ, ಹೆಚ್ಚಿನವರು ಎಂಬ ಪ್ರತಿಷ್ಠೆ, ಪ್ರತ್ಯೇಕತೆ ಸೋಂಕಲೂ ಇಲ್ಲ. ನನ್ನ ಬಾಲ್ಯದಲ್ಲಿ ಆಗಿಹೋದ ಕೆಲವು ಘಟನೆಗಳು, ಅಪ್ಪಾಜಿ ಆ